ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರ:1751/2022

ಚಾಸಾ:7 ಪ್ರಾಸಾ:3

ದಿನಾಂಕ: 12.06.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ವಾಸೀಂ |
| ತಂದೆಯ ಹೆಸರು | : | ಅಬ್ದುಲ್ಲಾ |
| ವಯಸ್ಸು | : | ವರ್ಷ |
| ಉದ್ಯೋಗ | : | |
| ವಾಸ ಸ್ಥಳ | : | |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ಆರೋಪಿಯ ಪರಿಚಯವಿಲ್ಲ. ಸಾಕ್ಷಿಗೆ ನಿಪಿ-2ರ ಮಹಜರನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ಸುಮಾರು 4 ವರ್ಷಗಳ ಹಿಂದೆ ಕೂಲಿ ಕೆಲಸಕ್ಕಾಗಿ ಕಂಡ್ಲೂರಿನಲ್ಲಿ ಹೋಗುತ್ತಿದ್ದಾಗ ಎಸ್ ಐ ರವರು ಕರೆದು ಸಹಿ ಹಾಕುವಂತೆ ಸೂಚಿಸಿರುತ್ತಾರೆ. ಆಗ ಸಮಯ 12 ಗಂಟೆಯಾಗಿತ್ತು.ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಯಾವ ಕಾರಣಕ್ಕಾಗಿ ಸಹಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ. ಸಾಕ್ಷಿ ನಿಪಿ-8ರಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಅದರಲ್ಲಿ ಚೀಲ ಇದೆ ಎಂದು ನುಡಿಯುತ್ತಾರೆ. ಸಾಕ್ಷಿ ನಿಪಿ-9 ರಿಂದ 11ನ್ನು ನೋಡಿ ಗುರುತಿಸಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ವಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:</u>**

ದಿ: 04-04-2022 ರಂದು ಕಂಡ್ಲೂರಿನ ದೂಪದ ಕಟ್ಟೆ ಹತ್ತಿರ ಪೊಲೀಸರು ಪಂಚನಾಮೆಗಾಗಿ ನನ್ನನ್ನು ಮತ್ತು ಚಾಸಾ-6ರವನ್ನು ಕರೆಸಿದ್ದರು ಎಂದರೆ ಸರಿ. ನಿಪಿ-8 ರಲ್ಲಿ ಕಾಣುವ ವಾಹನವನ್ನು ಪೊಲೀಸರು ಅದರಲ್ಲಿ ಇದ್ದ ಚೀಲ ಮತ್ತು ಒಳಗೆ ಇದ್ದ ದನದ

ತ್ಯಾಜ್ಯಗಳೊಂದಿಗೆ ವಶಕ್ಕೆ ಪಡೆದರು ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಚೀಲವನ್ನು ತೆಗೆದು ನಿಪಿ-9 ರಿಂದ 11 ರಲ್ಲಿ ಕಾಣುವ ತ್ಯಾಜ್ಯಗಳು ಅದರಲ್ಲಿ ಕಂಡು ಬಂದಿದ್ದು ನನಗೆ ತೋರಿಸಿ ಸ್ಥಳದಲ್ಲಿ ಅವುಗಳ ಪೋಟೋ ತೆಗೆದು ಅವುಗಳನ್ನು ವಶಕ್ಕೆ ಪಡೆದರು ಎಂದರೆ ಸರಿಯಲ್ಲ. ನಿಪಿ-8 ರಲ್ಲಿ ಕಾಣುವ ಗಾಡಿಯನ್ನು ಸದ್ರಿ ದಿನ ನನ್ನ ಪರಿಚಯಸ್ಥನಾದ ನ್ಯಾಯಾಲಯದ ಮುಂದೆ ಇರುವ ಆರೋಪಿ ತ್ಯಾಜ್ಯ ಸಾಗಿಸುವ ವೇಳೆಯಲ್ಲಿ ಸಿಕ್ಕಿಬಿದ್ದಿರುವುದಾಗಿ ಮಾಹಿತಿ ನೀಡಿ ಪಂಚನಾಮೆಯನ್ನು ಬೆಳಗ್ಗೆ 8 ರಿಂದ 9 ರವರೆಗೆ ಜರುಗಿಸಿ ಪೋಟೋಗಳನ್ನು ತೆಗೆದು ನಿಪಿ-2ಕ್ಕೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ಪೊಲೀಸರಿಗೆ ಅದೇ ದಿನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಹೇಳಿಕೆಯನ್ನು ನಿಪಿ-12 ಎಂದು ಗುರುತಿಸಲಾಯಿತು.

**<u>ವಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀಮತಿ ಮಧುರಾರವರಿಂದಃ</u>**

ನಿಪಿ-8ನ್ನು ಯಾವ ಕಾರಣಕ್ಕಾಗಿ ತೆಗೆದರು ಎಂದು ಗೊತ್ತಿಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**